ಒಂದಾಣೆ ಮಾಲೆ 238

ಬೀರಬಲನ ಜಾಣ್ಮೆ

*

ಸಂಗ್ರಾಹಕ, ಲೇಖಕ:
"ಕುಶ", ಮಂಗಳೂರು.

*

1959

ಬೆಲೆ: ೧ ಆಣೆ.

ಒಂದಾಣೆ ಮಾಲೆ, ಮಂಗಳೂರು.

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1959ನೇ ಜೂನ್ ತಿಂಗಳ ಎರಡನೆಯ ವಾರದ ವರೆಗೆ 238 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕವು ಹೊರಡುತ್ತಲೇ ಇದೆ.

238 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 4646 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆ ಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ 'ಒಂದಾಣೆ ಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ಮಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಆವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

ಬೀರಬಲನ ಜಾಣ್ಮೆ

೧. ಆಸ್ಥಾನ ಪ್ರವೇಶ

ಅಕ್ಬರ ಬಾದಷಹನ ದರ್ಬಾರು ನಡೆದಿತ್ತು. ಅರಮನೆಯ ಹೊರಗೆ ಒಬ್ಬ ಯುವಕನು ಬಂದು ಪ್ರವೇಶಕ್ಕೆ ಯತ್ನಿಸಿದನು. ಆದರೆ ದ್ವಾರಪಾಲಕನು ಅವನನ್ನು ಒಳಗೆ ಬಿಡಲೊಪ್ಪಲಿಲ್ಲ. ಯುವಕನು ದಾನೋಪಾಯದಿಂದ ದ್ವಾರಪಾಲಕನನ್ನು ಒಲಿಸುವೆನೆಂದು, ಅವನನ್ನು ಕುರಿತು, "ಅಯ್ಯಾ, ನನ್ನನ್ನು ಒಳಗೆ ಪ್ರವೇಶಿಸಲು ಬಿಟ್ಟರೆ ಬಾದಶಹರು ನನಗೆ ಕೊಡಲಿರುವ ಬಹುಮಾನದಲ್ಲಿ ಅರ್ಧ ಪಾಲಷ್ಟು ನಿನಗೆ ದೊರೆವುದು" ಎಂದಾಗ, ದ್ವಾರಪಾಲಕನು ಸಂತೋಷಗೊಂಡು, ಅವನನ್ನು ಒಳಗೆ ಹೋಗಲು ಬಿಟ್ಟನು.

ಒಳಬಾಗಿಲಲ್ಲಿ ಇನ್ನೊಬ್ಬ ದ್ವಾರಪಾಲಕನಿದ್ದನು. ಅವನೂ ಈ ಯುವಕನನ್ನು ಒಳಗೆ ಬಿಡಲೊಪ್ಪಲಿಲ್ಲ. ಮೊದಲಿನ ಭಟನಿಗೆಂದಂತೆಯೇ ಇವನಿಗೂ ಅರ್ಧಕೊಡುವೆನೆಂದು ಆಶೆ ತೋರಿಸಿ, ಒಲಿಸಿ, ಯುವಕನು ಒಳಗೆ ಹೋದನು.

ಯುವಕನು ಅಕ್ಬರನ ಆಸ್ಥಾನವನ್ನು ಪ್ರವೇಶಿಸಿದನು. ಬಾದಶಹನ ಆಸ್ಥಾನದಲ್ಲಿ ಕುಳಿತ ಪ್ರತಿಯೊಬ್ಬರೂ ಈ ತೇಜಸ್ವೀ ಯುವಕನನ್ನು ನೋಡಿ ಉಲ್ಲಸಿತರೂ, ಕುತೂಹಲಿಗರೂ ಆದರು. ಯುವಕನು ತನ್ನ ಪಾಂಡಿತ್ಯದಿಂದ ಅಕ್ಬರನನ್ನು ಮೆಚ್ಚಿಸಲು, ಅಕ್ಬರನು, "ಯುವಕ, ನಿನಗೆ ಬೇಕಾದ ಬಹುಮಾನವನ್ನು ಕೇಳು!" ಎಂದನು.

"ಪ್ರಭೋ, ದಯಮಾಡಿ ನನಗೆ ಇಪ್ಪತ್ತನಾಲ್ಕು ಚಡಿಯೇಟು ಕೊಡಿಸೋಣಾಗಲಿ!" ಎಂದನು. ಆಸ್ಥಾನದಲ್ಲಿದ್ದವರೆಲ್ಲರೂ ಆಶ್ಚರ್ಯಗೊಂಡು, ಆ ಮೇಲೆ ನಕ್ಕರು.

ಆಗ ಅಕಬರನು, "ನಿನ್ನ ಹೆಸರೇನು?" ಎಂದು ಯುವಕನನ್ನು ಪ್ರಶ್ನಿಸಿದನು.

ಯುವಕನೆಂದನು, "ಪ್ರಭೋ, ನನ್ನ ಹೆಸರು ಬೀರಬಲ."

ಅಕಬರ, "ಬೀರಬಲ, ನೀನೇಕೆ ಚಡಿಯೇಟುಗಳನ್ನಪೇಕ್ಷಿಸಿದೆ?"

ಬೀರಬಲನು ಉತ್ತರವಿತ್ತನು: "ಪ್ರಭೋ, ಏಟುಗಳು ನನಗಲ್ಲ. ನನಗೆ ದೊರೆವ ಬಹುಮಾನವನ್ನು ಇಬ್ಬರಿಗೆ ಪಾಲುಮಾಡಿ ಕೊಡುವೆನೆಂದು ವಚನವಿತ್ತಿದ್ದೇನೆ ಅರಮನೆಯ ಇಬ್ಬರು ದ್ವಾರಪಾಲಕರು ಅದನ್ನು ಹೊಂದುವವರು. ಅವರಿಬ್ಬರಿಗೆ ತಲಾ ಹನ್ನೆರಡರಂತೆ ಚಡಿಯೇಟು ಕೊಡಿಸಿರಿ."

ಅಕಬರನು, ಬೀರಬಲನ ಚಾತುರ್ಯದಿಂದ ಸಂತಸಗೊಂಡನು; ಮತ್ತು ಅವನನ್ನು ತನ್ನ ಮಂತ್ರಿಯಾಗಿ ನೇಮಿಸಿಕೊಂಡನು.

೨. ಬೀರಬಲನ ಕಿಚಡಿ

"ಚಳಿಗಾಲದಲ್ಲಿ ಯಮುನಾ ನದಿಯ ನೀರಲ್ಲಿ ಒಂದು ರಾತ್ರಿಯಿಡೀ ನಿಂತು, ಬೆಳಿಗ್ಗೆ ಮೇಲೆದ್ದು ಬಂದರೆ, ಬಾದಷಹರು ಬಹುಮಾನ ಕೊಡುವರು!" ಎಂಬುದಾಗಿ ಅಕ್ಬರನು ಒಮ್ಮೆ ಡಂಗುರ ಸಾರಿಸಿದನು.

ಬಡಬ್ರಾಹ್ಮಣನೊಬ್ಬನಿಗೆ ಆಸೆಯಾಯಿತು. ಅತೀವ ಚಳಿ ಸಹಿಸಿಯೂ ಇಡೀ ರಾತ್ರಿ ಯಮುನಾ ನದಿಯಲ್ಲಿ ನಿಂತು, ಅಕಬರನ ಬಳಿಗೆ ಬಂದನು. ಬಹುಮಾನ ಕೊಡಲು ಮನಸ್ಸಿಲ್ಲದೆ ಅಕಬರನು ಆ ಬ್ರಾಹ್ಮಣನೊಡನೆ, "ಬ್ರಾಹ್ಮಣಾ, ನೀನು ನದಿಯಲ್ಲಿ ನಿಂತಿದ್ದಾಗ ನಿನಗೆ ಅರಮನೆಯ ದೀಪಗಳು ಕಾಣಿಸುತ್ತಿದ್ದುವೇ?" ಎಂದು ಪ್ರಶ್ನಿಸಿದನು. ಬ್ರಾಹ್ಮಣನು ಹೌದೆಂದು ಉತ್ತರವಿತ್ತನು.

ಹಾಗಾದರೆ ನೀನು ಚಳಿಯಲ್ಲೇ ಇಡೀ ರಾತ್ರಿ ಕಳೆಯಲಿಲ್ಲ. ಅರಮನೆಯ ದೀಪಗಳ ಶಾಖದಿಂದ ಬೆಚ್ಚಗಾದ ನೀರಿನಲ್ಲಿ ಸುಖವಾಗಿ ನಿಂತಿದ್ದೆಯಲ್ಲವೇ? ನಿನಗೆ ಬಹುಮಾನ ಕೊಡಲಾಗುವುದಿಲ್ಲ" ಎಂದನು.

ಬ್ರಾಹ್ಮಣನು ಪೆಚ್ಚುಮೋರೆ ಹಾಕಿ ಮನೆಗೆ ಹೋದನು.

ಈ ದೃಶ್ಯವನ್ನು ಬೀರಬಲನಿಂದ ಸಹಿಸಲಾಗಲಿಲ್ಲ. ಒಂದು ದಿನ ಬೀರಬಲನು ಅಕಬರನನ್ನು ಬೇಟೆಯ ನೆವದಿಂದ ಕಾಡಿಗೆ ಕೊಂಡುಹೋದನು. ಬೇಟೆಯಾಡುತ್ತಾ, ಸ್ವಲ್ಪ ಹೊತ್ತಿನ ಮೇಲೆ ಇಬ್ಬರಿಗೂ ಹಸಿವಾಯಿತು. ಅಕಬರನು ಬೀರಬಲನೊಡನೆ ಕಿಚಡಿ ಮಾಡೆಂದನು. ಬೀರಬಲನು ಒಪ್ಪಿ, ಒಂದುಕಡೆ ಕುಳಿತು ಅಡುಗೆ ಆರಂಭಿಸಿದನು. ತುಂಬಾ

ಹೊತ್ತಾದರೂ ಕಿಚಡಿ ತಯಾರಾಗದಿರಲು, ಹಸಿವನ್ನು ತಾಳಲಾರದೆ ಅಕಬರನು, ಬೀರಬಲನು ಅಡುಗೆ ಮಾಡುವಲ್ಲಿಗೆ ಬಂದನು. ಅಲ್ಲಿ ನೋಡುತ್ತಾನೆ,— ಬೀರಬಲನು ಒಂದು ಮರದ ಕೊಂಬೆಗೆ ಮೇಲ್ಗಡೆ ಪಾತ್ರೆಕಟ್ಟಿ ಕಿಚಡಿಗೆ ಬೇಕಾದ ಸಾಮಾಗ್ರಿಗಳನ್ನು ಹಾಕಿಟ್ಟು, ಅನೇಕ ಅಡಿಗಳ ಕೆಳಗೆ, ಒಂದು ಚಿಕ್ಕ ಕಂದೀಲನ್ನು ಉರಿಸಿಟ್ಟಿದ್ದನು. ಅಕಬರನಿಗೆ ವಿಚಿತ್ರವೆನಿಸಿತು. "ಇಷ್ಟು ಸಣ್ಣ ಕಂದೀಲಿನ ಸಹಾಯದಿಂದ ಕಿಚಡಿ ತಯಾರಿಸುತ್ತಿರುವೆಯೇನು? ಅದು ಸಾಧ್ಯವೇ?" ಎಂದು ಅಕಬರನು ನಗುತ್ತಾ ಪ್ರಶ್ನಿಸಿದನು.

ಬೀರಬಲನಿಂದ ಕೂಡಲೇ ಉತ್ತರ ಬಂತು: "ದೂರದ ದೀಪದ ಸಹಾಯದಿಂದ ಯಮುನಾ ನದಿಯ ನೀರು ಬೆಚ್ಚಗಾಗುತ್ತದಲ್ಲವೇ? ಅದಕ್ಕಿಂತಲೂ ಸಮೀಪದ ದೀಪದಿಂದ ಅಡುಗೆಯಾಗದೇ?"

ಇದನ್ನು ಕೇಳಿ, ಅಕಬರನು ನಾಚಿ, ಆ ಬ್ರಾಹ್ಮಣನನ್ನು ಕರೆಸಿ, ಯೋಗ್ಯ ಬಹುಮಾನವಿತ್ತನು.

೩. ಜನ ಮರುಳೋ? ಜಾತ್ರೆ ಮರುಳೋ?

ಅಕಬರ ಬಾದಶಹನೂ ಬೀರಬಲನೂ ಒಮ್ಮೆ, ವೇಷಪಲ್ಲಟ ಮಾಡಿಕೊಂಡು ನಗರ ಸಂಚಾರಕ್ಕೆ ಹೊರಟರು. ಒಂದು ಕಡೆ, ದೇವತೆಗಳ ಮೂರ್ತಿಗಳನ್ನಿರಿಸಿದ್ದರು. ಸಾವಿರಾರು ಸಂಖ್ಯೆಯಲ್ಲಿ ಜನರು ಸೇರಿದ್ದರು. ಇದನ್ನು ನೋಡಿ ಅಕಬರನು ಬೀರಬಲನೊಡನೆ, "ಬೀರಬಲ್, ಜನ ಮರುಳೋ, ಜಾತ್ರೆ ಮರುಳೋ?" ಎಂಬುದಾಗಿ ಪ್ರಶ್ನಿಸಿದನು. ಬೀರಬಲನು ಕೂಡಲೇ, "ಜನ ಮರುಳು" ಎಂದು ಉತ್ತರವಿತ್ತನು. ಆಗ ಅಕಬರನು, "ಅಲ್ಲ! ನಿಶ್ಚಯವಾಗಿಯೂ ಜಾತ್ರೆ ಮರುಳು!" ಎಂದನು.

ಬೀರಬಲನು ಮರುದಿನ, ಪೇಟೆಯನಡುವೆ ಒಂದು ಕಡೆ ಚಿಕ್ಕ ಚಪ್ಪರ ಹಾಕಿಸಿ, ಅದರಲ್ಲಿ, ಒಂದು ಜತೆ ಪಾದರಕ್ಷೆಗಳನ್ನಿರಿಸಿದನು. ಅಲ್ಲಿ ಜನರ ಗುಂಪು ಸೇರಲಾರಂಭಿಸಿತು. ನೋಡುತ್ತ ನೋಡುತ್ತ, ದೊಡ್ಡ ಜಾತ್ರೆಯೇ ಆಯಿತು. ಬೀರಬಲನು ಅಕಬರನನ್ನು ಕರೆಸಿ, "ಪ್ರಭೋ, ನೋಡಿದಿರಾ? ಜನಮರುಳು ಎಂಬುದರಲ್ಲಿ ಇನ್ನಾವ ಅನುಮಾನ?" ಎಂದು ಪ್ರಶ್ನಿಸಿದನು. ಅಕಬರನು ಒಪ್ಪಲೇ ಬೇಕಾಯಿತು.

೪. ನ್ಯಾಯ ತೀರ್ಮಾನ

ತುಪ್ಪ ಮಾರುವ ಇಬ್ಬರು ವರ್ತಕರು, ಒಮ್ಮೆ ಬೀರಬಲನ ಬಳಿಗೆ ಬಂದರು. ಒಬ್ಬನೆಂದನು: "ಮಹಾಸ್ವಾಮಿ, ಇವನು ನನ್ನಿಂದ ಐನೂರು ವರಹ ಸಾಲ ತೆಗೆದುಕೊಂಡಿದ್ದಾನೆ. ಹಿಂತಿರುಗಿ ಕೊಡೆಂದರೆ, ತಾನು ತೆಗೆದುಕೊಂಡಿಲ್ಲವೆನ್ನುತಿದ್ದಾನೆ. ತಾವೇ ಇತ್ಯರ್ಥಿಸಿ ನ್ಯಾಯ ಕೊಡ ಬೇಕು. ಅವನೂ ಬಂದಿರುವನು. ವಿಚಾರಿಸೋಣವಾಗಲಿ!" ಎಂದು ಫಿರ್ಯಾದು ಕೊಟ್ಟನು. ಬೀರಬಲನು ಸ್ವಲ್ಪ ಯೋಚಿಸಿ, ಆ ಕೂಡಲೇ ವಿಚಾರಣೆಗೆ ತೊಡಗದೆ, ಅವರನ್ನು ಮರುದಿನ ಬರಹೇಳಿದನು.

ಮರುದಿನ ಅವರು ಬಂದೊಡನೆ, ಅವರಿಬ್ಬರಿಗೆ ಒಂದೇ ಗಾತ್ರದ, ಸಮಾನ ಭಾರವುಳ್ಳ, ತುಪ್ಪ ತುಂಬಿದ್ದ ಎರಡು ಪಾತ್ರೆಗಳನ್ನು ಕೊಟ್ಟು, ಒಂದು ವಾರದ ಅನಂತರ ಅವುಗಳನ್ನು ಹಿಂದೆ ತರುವಂತೆ ಹೇಳಿದನು. ಆ ಪಾತ್ರೆಗಳ ತಳದಲ್ಲಿ ಬೀರಬಲನು ಒಂದೊಂದು ಮೊಹರನ್ನು ಹಾಕಿಟ್ಟಿದ್ದನು.

ಒಂದು ವಾರ ಕಳೆಯುತ್ತಲೇ, ಅವರಿಬ್ಬರೂ, ಪಾತ್ರೆಗಳೊಡನೆ ಬಂದರು. ಬೀರಬಲನು ಆ ಪಾತ್ರೆಗಳನ್ನು ಬೆಂಕಿಯ ಮೇಲಿರಿಸಿ, ತುಪ್ಪ ಕರಗಿಸಲು, ವಾದಿಯ ಪಾತ್ರೆಯ ಅಡಿಯಲ್ಲಿ ಮೊಹರು ಇತ್ತು. ಪ್ರತಿವಾದಿಯ ಪಾತ್ರೆಯಲ್ಲಿದ್ದ ಮೊಹರು ಕಾಣೆಯಾಗಿತ್ತು. ಕೂಡಲೇ ಬೀರಬಲನು, ಆ ಎರಡೂ ಪಾತ್ರೆಗಳಲ್ಲಿ ತಾನು ಮೊಹರುಗಳನ್ನು ಹಾಕಿದ್ದೆನೆಂದು ಬಹಿರಂಗಪಡಿಸಿ, ವಾದಿಯ ಐನೂರು ಮೊಹರುಗಳನ್ನು ಹಿಂದಕ್ಕೆ ಕೊಡುವಂತೆ ಪ್ರತಿವಾದಿಗೆ ಆಜ್ಞಾಪಿಸಿದನು.

೫. ಕಳ್ಳನ ಪತ್ತೆ

"ದರ್ಜಿಗಳು ಯಾವಾಗಲೂ ಕಳ್ಳರು" ಎಂದು ಬೀರಬಲನು ಒಮ್ಮೆ ಅಕಬರನೊಡನೆ ಹೇಳಿದನು.

"ನೀನು ಹೇಗೆ ಅದನ್ನು ರುಜುಪಡಿಸುವೆ?" ಎಂದು ಅಕಬರನು ಪ್ರಶ್ನಿಸಲಾಗಿ, "ರುಜುಪಡಿಸಬೇಕಾದ ಅವಶ್ಯಕತೆಯೇ ಇಲ್ಲ. ಅವರ ನಡೆನುಡಿಗಳಿಂದಲೇ ಅದನ್ನು ಕಂಡುಕೊಳ್ಳಬಹುದು"—ಎಂದನು ಬೀರಬಲ.

ಅಕಬರನಿಗೆ ಬೀರಬಲನ ವಾದವನ್ನು ಕಂಡು ಕೋಪಬಂದಿತು. "ಅರಮನೆಯಲ್ಲೇ ದರ್ಜಿಯನ್ನು ಕುಳ್ಳಿರಿಸಿ, ಅವನ ಮೇಲೆ ಕಣ್ಣಿಡುವಂತೆ ಕಾವಲನ್ನು ಇಟ್ಟರೆ, ದರ್ಜಿಯಿಂದ ಕದಿಯಲು ಸಾಧ್ಯವೇ ಇಲ್ಲ,— ಅಲ್ಲವೇ?" ಎಂದು ಅಕಬರನು ಕೇಳಿದನು.

"ಮಹಾಪ್ರಭೋ, ಕೋಪಿಸಬಾರದು. ತಾವು ಅಂದಂತೆ ಅರಮನೆಯಲ್ಲೇ, ಕಾವಲಿನಿದಿರಲ್ಲೆ ದರ್ಜಿಯನ್ನು ಕೆಲಸಕ್ಕೆ ಹಚ್ಚಿದರೆ ಕೂಡ, ಅವನು ಕದಿಯದೆ ಬಿಡುವವನಲ್ಲ. ಈ ವಿಷಯದಲ್ಲಿ ನಾನು ಅಭಿಪ್ರಾಯವನ್ನು ಬದಲಾಯಿಸುವ ಆವಶ್ಯಕತೆಯೇ ಇಲ್ಲ"—ಎಂದು, ಸ್ಥಿರಸ್ವರದಿಂದ ನುಡಿದನು.

"ಇದು ಎಷ್ಟರ ಮಟ್ಟಿಗೆ ನಿಜವೋ ನೋಡಿಯೇ ಬಿಡುತ್ತೇನೆ"— ಎಂಬುದಾಗಿ ಅಕಬರನು ಬೀರಬಲನೊಡನೆ ಹೇಳಿ, ಹೊಲಿಗೆ ಕೆಲಸದಲ್ಲಿ ಒಳ್ಳೇ ನಿಷ್ಣಾತನೆನಿಸಿದ ದರ್ಜಿಯೊಬ್ಬನನ್ನು ಕರೆಸಿದನು; ಮತ್ತು ಉತ್ತಮ ಹಾಗು ನಯವಾದ ಬಟ್ಟೆಯನ್ನು ಅವನ ವಶಕ್ಕೆ ಕೊಡಿಸಿ, ಅರಮನೆಯಲ್ಲಿ ತನ್ನೆದುರಲ್ಲೆ, ಬೇಗಂ ಸಾಹಿಬಾರವರಿಗೆ ಒಂದು ರವಕೆ ಹೊಲಿದುಕೊಡುವಂತೆ ಆಜ್ಞಾಪಿಸಿದನು. ಆ ರವಕೆಯ ತಯಾರಿಗೆ ನಾಲ್ಕು ದಿನಗಳು ಬೇಕಾಗುವುವೆಂದು ದರ್ಜಿಯು ಹೇಳಲು, ನಾಲ್ಕು ದಿನಗಳಲ್ಲೂ ಅವನಿಗೆ ಅರಮನೆಯೊಳಗೇ ಊಟದ ವ್ಯವಸ್ಥೆಯೂ ಮಾಡಲ್ಪಟ್ಟಿತು.

ದರ್ಜಿಯು ಹೊಲಿಯುವುದಕ್ಕಾರಂಭಿಸಿದನು. ಅತ್ಯಂತ ನುಣುಪಾದ ಆ ಬಟ್ಟೆಯನ್ನು ಅವನು ಬಲು ಜಾಗ್ರತೆಯಿಂದ ಹೊಲಿಯುತ್ತಿದ್ದನು; ಊಟಕ್ಕಾದರೂ ಅವನು ಎದ್ದುಹೋಗದಂತೆ ಅವನಿಗೆ ತಿಂಡಿ-ತೀರ್ಥಗಳು ಕುಳಿತಲ್ಲಿಗೇ ಬರುತ್ತಿದ್ದುವು. ಅಕಬರನಂತೂ ಆ ದರ್ಜಿಯ ಮೇಲೆ ಕಣ್ಣಿಟ್ಟು, ಒಂದು ಕ್ಷಣವಾದರೂ ಅಲ್ಲಿಂದ ಕದಲದೆ ಕುಳಿತಿದ್ದನು. ಒಂದು ದಿನವು ಹಾಗೇ ಕಳೆದುಹೋಯಿತು. ಎರಡನೇ ದಿನ ದರ್ಜಿಯು ಹೊಲಿಯುತ್ತಿರುವಾಗ, ಆ ಕೋಣೆಯ ಕಿಟಕಿಯ ಹೊರಗಿಂದ ದರ್ಜಿಯ ಮಗನ ಮುಖ ಕಾಣಿಸಿತು. ಆ ಬಾಲಕನು ತನ್ನ ತಂದೆಯನ್ನುದ್ದೇಶಿಸಿ, "ಅಪ್ಪಾ, ನೀನು ಇಲ್ಲಿ ಇದ್ದಿಯಾ? ನೀನು ಬಾರದ್ದನ್ನು ನೋಡಿ ಅಮ್ಮನು ಕೋಪಗೊಂಡಿದ್ದಾಳೆ. ನೀನಾಗಿ ಬರುವಿಯೋ ಅಥವಾ ತಾನೇ ಬಂದು ಎಳೆದುಕೊಂಡು ಹೋಗಲೋ—ಎಂತಲೂ ಕೇಳಿದ್ದಾಳೆ. ನೀನು ಈ ಕ್ಷಣವೇ

ಬಾರದಿದ್ದರೆ ಇನ್ನು ಮುಂದೆ ಮನೆಯೊಳಗೆ ಕಾಲಿಡಲು ಬಿಡುವುದಿಲ್ಲವಂತೆ. ಬಾ ಅಪ್ಪ, ಈಗಲೇ ಬಾ! ಬರುವಿಯಲ್ಲವೇ?"—ಎಂದು ಆಗ್ರಹಪಡಿಸಿದನು. ದರ್ಜಿಯು ಮಗನೊಡನೆ, "ಎಲಾ ಪೋರ, ನೀನಿಷ್ಟು ಸೊಕ್ಕಿರುವಿಯಾ? ನಾಲ್ಕು ದಿನಗಳ ವರೆಗೆ ನಾನು ಮನೆಗೆ ಬರಲು ಸಾಧ್ಯವಿಲ್ಲ. ನನಗೆ ಇಲ್ಲಿ ಕೆಲಸವಿದೆ. ಸಾಮಾನ್ಯ ಕೆಲಸವಲ್ಲ—ಬಾದಶಹರ ಆಜ್ಞೆಯಾಗಿದೆ. ನೀನು ಇಲ್ಲಿಂದ ಹೊರಡುತ್ತೀಯೋ ಇಲ್ಲವೋ?" ಎಂದು ಗದರಿಸುತ್ತ, ಕುಳಿತಲ್ಲಿಂದಲೇ, ತನ್ನ ಪಾದರಕ್ಷೆಗಳಲ್ಲೊಂದನ್ನು ಮಗನ ಕಡೆಗೆ ಬಿಸಾಡಿದನು. ಮಗನು, ಅದನ್ನು ಕೈಯಲ್ಲಿ ಹಿಡಿದುಕೊಂಡು ಅಳುತ್ತ ಮನೆಗೋಡಿದನು.

ನಾಲ್ಕು ದಿನಗಳಾದುವು. ರವಕೆಯೂ ತಯಾರಾಯಿತು. ಅತಿ ನಾಜೂಕಾಗಿ ಅದನ್ನು ಹೊಲಿದಿದ್ದುದರಿಂದ, ಅಕಬರನು ಆ ದರ್ಜಿಗೆ ಹೊಲಿಗೆ ಮಜೂರಿಯನ್ನೂ, ಸಂತೋಷದಿಂದ ಬಹುಮಾನವನ್ನೂ ಇತ್ತು, ಕಳುಹಿಸಿಕೊಟ್ಟನು. ಆ ಮೇಲೆ ಬೀರಬಲನೊಡನೆ "ಬೀರಬಲ್, ನೋಡಿದೆಯಾ? ಒಂದು ತುಂಡೂ ಕದಿಯಲಾರದೆ ಹೊಲಿದುಕೊಟ್ಟನು. ನೀನು ಸೋತೆ!"—ಎಂದನು.

ಆದರೆ, ಬೀರಬಲನು ಮಾತ್ರ ಒಪ್ಪಲಿಲ್ಲ. "ಮಹಾಪ್ರಭೋ, ಅವನು ಕದ್ದಿರುವನೆಂದೇ ಹೇಳುತಿದ್ದೇನೆ" ಎಂದನು. ಅಕಬರನಿಗೆ ಕೋಪಬಂದಿತಾದರೂ ತಡೆದುಕೊಂಡು, ಸುಮ್ಮನಾದನು.

ಒಮ್ಮೆ ಬಾದಶಹನು ಬೇಗಮಳೊಂದಿಗೆ ನಗರಮೆರೆವಣಿಗೆ ನಡೆಸಿದನು. ನಗರವೆಲ್ಲವೂ ಅಲಂಕೃತವಾಗಿತ್ತು. ಮೆರೆವಣಿಗೆಯಲ್ಲಿ ಹೊರಟ ಬೇಗಮಳು, ಆ ದರ್ಜಿಯು ಹೊಲಿದ ರವಕೆಯನ್ನೇ ತೊಟ್ಟಿದ್ದಳು. ಬೇಗಮಳು, ತನ್ನದು ಅತಿ ಮೌಲ್ಯದ ಅತಿ ಅಂದವಾದ ರವಕೆಯೊಂದು ಗರ್ವಪಟ್ಟುಕೊಂಡಿರಲು, ಪಕ್ಕದ ಒಂದು ಮನೆಯಲ್ಲೋರ್ವ ಮಹಿಳೆಯು ತೊಟ್ಟುಕೊಂಡಿದ್ದ ಒಂದು ರವಕೆಯ ಕಡೆಗೆ ಬೇಗಮಳ ದೃಷ್ಟಿ ಸರಿಯಿತು. ಆ ರವಕೆಯು ಬೇಗಮಳ ರವಕೆಯ ದ್ವಿಪ್ರತಿಯಂತೆ ಇತ್ತು! ಬೇಗಮಳ ಗರ್ವಭಂಗವಾದಂತಾಯಿತು. ಅರಮನೆಗೆ ತಲಪಿದೊಡನೆ ಅವಳು, ಅಕಬರನಿಗೆ ಇದನ್ನು ತಿಳಿಸಿದಳು. ಅಕಬರನು, ಆ ಹೆಂಗಸು ಯಾರೆಂದು ತಿಳಿದುಕೊಂಡು ಬರಲು ದೂತರನ್ನಟ್ಟಿದನು. ಆ ಸ್ತ್ರೀಯು ಆ ದರ್ಜಿಯ ಪತ್ನಿಯೆಂದು ತಿಳಿದುಬಂತು. ಅಲ್ಲಿದ್ದ ಬೀರಬಲನು ಕೂಡಲೇ ಅಕಬರನೊಡನೆ,

"ಪ್ರಭೋ, ತಾವಿತ್ತ ಉತ್ತಮ ವಸ್ತ್ರದ ರವಕೆಯು ಆ ದರ್ಜಿಯ ಹೆಂಡತಿಯ ದೇಹವನ್ನಲಂಕರಿಸಿದೆ. ಕೃತಕ ರವಕೆಯು ಬೇಗಂ ಸಾಹಿಬರಿಗೆ ದೊರೆತಿದೆ!" ಎಂದನು. ಅಕಬರನಿಗೆ ಆಶ್ಚರ್ಯವೂ ಕೋಪವೂ ಏಕಕಾಲದಲ್ಲುಂಟಾದುವು. ರಾಜಾಜ್ಞೆಯಂತೆ ದರ್ಜಿಯನ್ನು ಕರೆತಂದು, ಬಾದಶಹನ ಮುಂದೆ ನಿಲ್ಲಿಸಿದರು ಅಕಬರನು "ದರ್ಜಿಯೇ, ಸತ್ಯವನ್ನೆ ನುಡಿಯುವಿಯಾದರೆ ನಿನ್ನ ಜೀವವೂ ಉಳಿವುದು. ನಾನು ಕೊಟ್ಟ ಉತ್ತಮ ಅರಿವೆಯು ನಿನ್ನ ಮನೆ ಸೇರಿದೆ. ಅದರ ಸ್ಥಾನದಲ್ಲಿ ಕೃತಕವಾದಂಥ ಇನ್ನೊಂದು ಅರಿವೆ ನನಗೆ ಕೊಟ್ಟಿರುವೆ. ಇದು ಹೇಗಾಯಿತೆಂದು ಹೇಳು!" ಎಂದು ಗರ್ಜಿಸಿದನು.

ದರ್ಜಿಯು ತನ್ನ ಕಳ್ಳತನವು ಹೊರಬಿತ್ತೆಂದು ತಿಳಿದು ಹೆದರಿ, ಬಾದಶಹನ ಕಾಲಿಗೆ ಬೀಳುತ್ತ, "ಪ್ರಭೋ, ಮಹಾಪರಾಧವಾಯಿತು. ನನ್ನ ಮಗನು, ಕೊಠಡಿಯ ಹೊರಗಿಂದ ಕರೆದಾಗ ನಾನು ಬಿಸುಡಿದ ಪಾಪೋಸಿನಲ್ಲಿ, ತಾವು ಕೊಟ್ಟ ವಸ್ತ್ರವನ್ನಿಟ್ಟಿದ್ದೆ. ಕೃತಕ ವಸ್ತ್ರದಿಂದ ಬೇಗಂ ಸಾಹಿಬರವರ ರವಕೆಯನ್ನು ಹೊಲಿದುಕೊಟ್ಟೆ. ಮೊದಲನೇ ದಿನ, ರಾತ್ರಿ ಕಾಲ, ಒಂದು ಕ್ಷಣವಲ್ಲಿ ತಮ್ಮ ಕಣ್ಣು ಕೂರಿದ್ದಾಗ, ಒಳ್ಳೇ ವಸ್ತ್ರವನ್ನು ಅಡಗಿಸಿಟ್ಟದ್ದೆ; ಇಲ್ಲಿಗೆ ಬರುವ ಮೊದಲೇ, ತಾವು ನನ್ನೊಡನೆ ಕೊಡಲು ಆರಿಸಿಟ್ಟಿದ್ದ ವಸ್ತ್ರದ ಮಾದರಿಯನ್ನು ಸೇವಕರಿಂದ ಗುಟ್ಟಾಗಿ ಗೊತ್ತುಮಾಡಿಕೊಂಡು, ಅದರಂತೇ ತೋರುವ ಕೃತಕ ನಮೂನೆಯನ್ನು ತಂದಿದ್ದೆ. ನನ್ನ ದುರಾಶೆಗಾಗಿ ಮಹಾಪ್ರಭುಗಳು ಕ್ಷಮಿಸಬೇಕು." ಎಂದು ಅಂಗಲಾಚಿ ಬೇಡಿಕೊಂಡನು.

ಅಕಬರನು ದರ್ಜಿಯನ್ನು ಕ್ಷಮಿಸಿ ಕಳುಹಿಕೊಟ್ಟನು.

೬. ಹತ್ತು ಮಂದಿ ಮೂರ್ಖರು

ಒಮ್ಮೆ ಅಕಬರನು ಬೀರಬಲನೊಡನೆ, "ಧಿಲ್ಲಿ ನಗರದೊಳಗೆ ಶತ ಮೂರ್ಖರು ಇದ್ದಾರೆಯೋ?"—ಎಂದು ಪ್ರಶ್ನಿಸಿದನು. (ಇಲ್ಲಿ, 'ಶತ ಮೂರ್ಖರು' ಎಂದರೆ 'ಅತಿ ಮೂರ್ಖರು' ಎಂದರ್ಥ.) ಬೀರಬಲನು, "ಜೀ, ಹಲವು ಮಂದಿ ಇರುವರು!" ಎಂದುತ್ತರವಿತ್ತನು.

"ಹಾಗಾದರೆ, ಅವರಿಂದ ಹತ್ತು ಮಂದಿ ಮೂರ್ಖರನ್ನು ಕರೆತಂದು ನನ್ನ ಮುಂದೆ ನಿಲ್ಲಿಸು; ಇದಕ್ಕೆ ನಿನಗೆ ಒಂದು ವಾರದ ಅವಧಿ ಕೊಟ್ಟಿರು

ತ್ತೇನೆ"—ಎಂದು ಅಕಬರನು ಆಜ್ಞಾಪಿಸಿದನು. "ಅಪ್ಪಣೆ!"—ಎಂದು ಹೇಳುತ್ತ, ಬೀರಬಲನು, ದಶಮೂರ್ಖರ(ಹತ್ತು ಮಂದಿ ಮೂರ್ಖರ) ಅನ್ವೇಷಣೆಗಾಗಿ ಹೊರಟನು.

ಬೀರಬಲನು, ಆ ಕಾರ್ಯಾರ್ಥ ಹೋಗುತ್ತಿರಲು, ದಾರಿಯಲ್ಲೊಬ್ಬನು ಒಂದು ಅಶ್ವವನ್ನೇರಿ ಹೋಗುತ್ತಿರುವುದನ್ನು ಕಂಡನು. ಆ ಕುದುರೆಯ ಮೇಲೆ ಕುಳಿತವನ ತಲೆಯ ಮೇಲೆ ಹುಲ್ಲಿನ ಒಂದು ಹೊರೆಯಿತ್ತು. ಈ ನಡತೆಯು ಬೀರಬಲನಿಗೆ ವಿಚಿತ್ರವೆನಿಸಿತು. ಕೂಡಲೇ ಅವನೊಡನೆ "ಅಯ್ಯಾ, ನಿನ್ನೊಡನೆ ಕುದುರೆಯಿದ್ದೂ ನೀನು ತಲೆ ಮೇಲೆ ಹುಲ್ಲಿನ ಹೊರೆ ಇಟ್ಟುಕೊಂಡು ಒಯ್ಯುತ್ತಿರಲು ಕಾರಣವೇನು?" ಎಂದು ವಿಚಾರಿಸಿದನು.

ಅಶ್ವಸವಾರನು, "ಮಹಾಮಂತ್ರಿಗಳೇ, ನನ್ನ ಕುದುರೆಯು ತೀರ ಬಡಕಲಾಗಿದೆ. ಅದರ ಮೇಲೆ ನಾನು ಕುಳಿತಿರುವುದೇ ತಪ್ಪು. ಇನ್ನು ಮೇಲೆ ಅದರ ಬೆನ್ನಿನಲ್ಲಿ ಈ ಹುಲ್ಲಿನ ಹೊರೆಯನ್ನೂ ಬಿಟ್ಟರೆ ನನ್ನದು ದೊಡ್ಡ ತಪ್ಪಾಗುವುದಲ್ಲವೇ? ಈ ಬಡ ಪ್ರಾಣಿಗೆ ಸ್ವಲ್ಪವಾದರೂ ಭಾರ ಕಡಿಮೆಯಾಗಲೆಂದು ಈ ರೀತಿ ಮಾಡುತ್ತಿದ್ದೇನೆ" ಎಂದನು. ಒಬ್ಬ ಒಳ್ಳೇ ಮೂರ್ಖನು ಸಿಕ್ಕಿದನೆಂದು ಬೀರಬಲನು ಮನಸ್ಸಿನಲ್ಲೆಣಿಸಿ, ಆ ಅಶ್ವಾರೋಹಿಗೆ ಒಂದು ವಾರದ ಅನಂತರ ಬಾದಶಹನ ಆಸ್ಥಾನಕ್ಕೆ ಬರುವಂತೆ ತಿಳಿಸಿದನು; ಅವನು ಒಪ್ಪಿದನು.

ಬೀರಬಲನು ಮುಂದರಿಯುತ್ತ, ಒಂದು ಕಡೆಯಲ್ಲಿ, ಕೊಳೆಯಲ್ಲಿ ಕಾಲು ಜಾರಿ ಬಿದ್ದವನೊಬ್ಬನನ್ನು ಕಂಡನು. ಬಿದ್ದವನಿಗೆ, ಅಲ್ಲಿಂದ ಏಳಬಹುದಿತ್ತು. ಆದರೆ, ಅವನು ಏಳಲು ಯಾವ ಯತ್ನವನ್ನೂ ಮಾಡದೆ, ತನ್ನ ಎರಡು ಕೈಗಳನ್ನು ಅಗಲಕ್ಕೆ ಚಾಚಿ, "ಅಯ್ಯಾ, ನನ್ನನ್ನು ಮೇಲಕ್ಕೆ ಎಳೆದು ತೆಗೆಯಿರಿ!" ಎಂದು ಕೂಗುತಿದ್ದನು. ಬೀರಬಲನಿಗೆ ನಗುವನ್ನು ತಡೆಯಲಾಗಲಿಲ್ಲ. ಅವನೊಡನೆ, "ಏನಯ್ಯಾ, ಇದು? ನೀನಾಗಿಯೇ ಎದ್ದು ನಿಲ್ಲಬಹುದಾದರೂ ಹೀಗೇಕೆ ಅಂಗಾತ ಮಲಗಿ ಕೈಗಳನ್ನು ಚಾಚಿ ದಾರಿಗರ ಸಹಾಯಕ್ಕೆ ಕೂಗುತ್ತಿದ್ದಿ?" ಎಂದು ವಿಚಾರಿಸಿದನು. ಬಿದ್ದುಕೊಂಡವನು ಹೀಗೆ ಉತ್ತರವಿತ್ತನು: "ಮಹಾಮಂತ್ರಿಗಳೇ, ನಾನು ಒಂದು ಪಾತ್ರೆ ಮಾಡಿಸಲಿಕ್ಕೆ ಹೋಗುತಿದ್ದೇನೆ. ಅದು ದೊಡ್ಡ ಗುಡಾಣ. ಆ ಗುಡಾಣದ ಗಾತ್ರವು ಇಂತಿಷ್ಟೇ ಇರಬೇಕೆಂದು ಲೆಕ್ಕ ಹಾಕಿ, ಅದಕ್ಕೆ ಸ

ಚೆಹಾಗಿ ಕೈಗಳನ್ನು ಚಾಚಿ ಹಿಡಿದು ಬಂದಿರುತ್ತೇನೆ. ಈಗ ಮೇಲಕ್ಕೇಳ ಬೇಕಾದರೆ ಕೈಗಳನ್ನು ನೆಲಕ್ಕೆ ಊರಬೇಕಾಗುತ್ತದೆ. ಹಾಗೆ ಮಾಡಿದಾಗ ಆಳತೆ ತಪ್ಪಿಹೋಗುತ್ತದೆ. ಆದುದರಿಂದ ದಯಮಾಡಿ ನೀವೇ ಒಂದು ಕೈ ಕೊಟ್ಟು ಎಬ್ಬಿಸಿಬಿಡಿರಪ್ಪ!" ಇದನ್ನು ಕೇಳಿ ಬೀರಬಲನಿಗೆ ವಿನೋದವೆನಿ ಸಿತು. ಕೈಕೊಟ್ಟು ಆ ಪ್ರಾಣಿಯನ್ನು ಮೇಲಕ್ಕೆಬ್ಬಿಸಿ, ಒಂದು ವಾರದ ಅನಂತರ ಬಾದಶಹನ ಆಸ್ಥಾನಕ್ಕೆ ಬರಬೇಕೆಂದು ತಿಳಿಸಿದನು. ತನಗೆ ಇಬ್ಬರು ಮೂರ್ಖರು ದೊರೆತರೆಂದೂ ಸಂತೋಷಪಟ್ಟನು.

ಅಲ್ಲಿಂದ ಮುಂದೆ ಸಾಗುತ್ತ, ಒಂದು ಕಡೆ, ಬೀರಬಲನಿಗೆ, ಇಬ್ಬರು ಹೊಡೆದಾಟಕ್ಕೆ ಸಿದ್ಧರಾಗುತ್ತಿರುವುದು ಕಂಡುಬಂತು. ಬೀರಬಲನು ಅವ ರಿಗೆ ತುಸು ತಡೆವಂತೆ ಹೇಳಿ, ಜಗಳದ ಕಾರಣವೇನೆಂದು ಪ್ರಶ್ನಿಸಿದನು. ಅವರಲ್ಲೊಬ್ಬನು ಹೇಳಿದನು: "ಮಹಾಮಂತ್ರಿಗಳೇ, ನಾವಿಬ್ಬರೂ ಸ್ನೇಹಿ ತರು. ನಾವು ಸಂಭಾಷಿಸುತ್ತ ದಾರಿ ಸಾಗಿದ್ದೇವೆ. ಆಗ ನಾನು ನನ್ನೀ ಗೆಳೆಯನೊಡನೆ, "ಒಂದು ವೇಳೆ ದೇವರು ನಮ್ಮ ಮೇಲೆ ದಯತೋರಿ ಪ್ರತ್ಯಕ್ಷನಾಗಿ ವರಕೇಳೆಂದರೆ, ನಾನು ಒಂದು ಎಮ್ಮೆ ಕೊಡಿಸೆಂದು ಕೇಳು ವೆನು"—ಎಂದು ಹೇಳಿದೆ. ಆಗ ಈತನು ನನ್ನ ಮೇಲೆ ಮತ್ಸರದಿಂದ, "ನಾನು ಒಂದು ಹುಲಿಯನ್ನು ಕೇಳುವೆನು—ಅದು ನಿನ್ನ ಎಮ್ಮೆಯನ್ನು ತಿನ್ನುವುದು"—ಎಂದನು. ನನಗೆ ಸಿಟ್ಟು ಬಂತು. ನಾವೀಗ ಹೊಡೆದಾಡಿ ಕೊಳ್ಳಲು ಸಿದ್ಧ!" ಬೀರಬಲನು ಅವರಿಬ್ಬರಿಗೂ ಸಮಾಧಾನಮಾಡುತ್ತಾ, ಒಂದು ವಾರದ ಮೇಲೆ ಬಾದಶಹನ ಆಸ್ಥಾನಕ್ಕೆ ಬರುವಂತೆ ಅವರಿಗೆ ಹೇಳಿ, ತನಗೆ ನಾಲ್ವರು ಮೂರ್ಖರು ಸಿಕ್ಕಿದರೆಂದು ಹಿಗ್ಗಿ, ಮುನ್ನಡೆದನು.

ನಡೆದುಹೋಗುವಾಗ, ಎದುರಿನಿಂದೊಬ್ಬನು ಓಡುತ್ತ ಬಂದು ಬೀರ ಬಲನಿಗೆ ಢಿಕ್ಕಿಹೊಡೆದನು. ಆ ಕೂಡಲೇ, ತಪ್ಪಿಗಾಗಿ ಕ್ಷಮೆ ಬೇಡಿದನು. ಹೀಗೆ ಓಡುತ್ತಿರುವ ಕಾರಣವೇನೆಂದು ಬೀರಬಲನು ಕೇಳಲಾಗಿ, ಅವನು, "ಸ್ವಾಮಿ, ನಾನು ಏನುಮಾಡಿದರೂ ನನ್ನ ನೆರಳು ನನ್ನ ಮುಂದೇ ಇದೆ. ಅದನ್ನು ಹಿಂದಿಕ್ಕಿ ಹೋಗಬೇಕೆಂದು ನಾನು ವೇಗವಾಗಿ ಓಡುವಾಗ ನಿಮಗೆ ಢಿಕ್ಕಿಬಡಿದೆ!"—ಎಂದನು ಬೀರಬಲನಿಗೆ ಇದೊಂದು ದೊಡ್ಡ ತಮಾಷೆ ಯೆನಿಸಿತು. ಒಂದು ವಾರದನಂತರ ಬಾದಶಹನ ಆಸ್ಥಾನಕ್ಕೆ ಬರುವಂತೆ ಅವನಿಗೆ ತಿಳಿಸಿ, ದಾರಿ ಸಾಗಿದನು.

ಸ್ವಲ್ಪ ದೂರದಲ್ಲಿ ನಡೆಯುತಿದ್ದ ಒಬ್ಬನು, ತನ್ನ ಕೈಯೊಳಗಿನ ಮೊಸರುಗಡಿಗೆಯನ್ನು ಕೆಳಗೆ ಬಿಟ್ಟು ಬಿಟ್ಟುದನ್ನು ಬೀರಬಲನು ನೋಡಿದನು. ಗಡಿಗೆಯು ಪುಡಿಪುಡಿಯಾಗಿ, ಮೊಸರೆಲ್ಲ ಚೆಲ್ಲಿಹೋಯಿತು. ಬೀರಬಲನು ಆಶ್ಚರ್ಯಪಟ್ಟು, "ನೀನೇಕೆ, ತಿಳಿದೂ ತಿಳಿದು ಆ ಗಡಿಗೆಯನ್ನು ಕೈಬಿಟ್ಟಿ?" ಎಂದು ವಿಚಾರಿಸಿದನು. ಅವನು ಉತ್ತರವಿತ್ತನು: "ಅಯ್ಯಾ, ನಾನು ಮೊಸರನ್ನು ತರುತ್ತಿರುವಾಗ ನನ್ನಲ್ಲೊಂದು ಸಂದೇಹವುಂಟಾಯಿತು. ಮಡಿಕೆಯು ಮೊಸರನ್ನಾಧರಿಸಿದೆಯೋ ಅಥವಾ ಮೊಸರು ಮಡಿಕೆಯನ್ನಾಧರಿಸಿದೆಯೋ ಎಂದು. ಸಂದೇಹನಿವಾರಣೆಗಾಗಿ ಗಡಿಗೆಯನ್ನು ಕೆಳಗೆ ಬಿಟ್ಟೆ. ಈಗ ತಿಳಿಯಿತು—ಮಡಿಕೆಯೇ ಮೊಸರನ್ನಾಧರಿಸಿದೆ ಎಂಬುದಾಗಿ"—ಎಂದನು. ಬೀರಬಲನು ಬಲು ಕಷ್ಟದಿಂದ ನಗು ತಡೆದುಕೊಂಡು, ಅವನಿಗೆ ಒಂದು ವಾರದನಂತರ ಅಕಬರನ ಆಸ್ಥಾನಕ್ಕೆ ಬರಹೇಳಿ, ಆರನೇ ಮೂರ್ಖನ ಬೇಟೆ ಸಫಲಗೊಂಡಿತೆಂದು ಹರ್ಷತಾಳಿ, ಮುಂದೆ ಹೋದನು.

ಒಂದು ಕಡೆ ಹೊಯಿಗೆಯ ಪ್ರದೇಶ ಕಾಣಿಸಿತು. ಅಲ್ಲಿ ಒಬ್ಬನು ಅಗೆಯುತ್ತಾ, ಏನನ್ನೋ ಹುಡುಕುತಿದ್ದನು. "ಏನನ್ನು ಹುಡುಕುತ್ತಿರುವೆ?" ಎಂದು ಬೀರಬಲನು ವಿಚಾರಿಸಲಾಗಿ ಆ ಪ್ರಾಣಿಯು, "ನಾನು ಒಂದು ವರ್ಷದ ಹಿಂದೆ ಇಲ್ಲಿ ಒಂದು ಉಂಗುರವಿಟ್ಟಿದ್ದೆ ಎಂದು ನೆನಪು. ನಾನು ನಿಜವಾಗಿ ಉಂಗುರವಿಟ್ಟಿದ್ದ ಸ್ಥಳದಲ್ಲಿ ಆ ದಿನ ಆಕಾಶದ ಮೇಲೆ ಒಂಟೆಯ ಆಕಾರದ ಮೋಡವಿತ್ತು. ಈಗ ಆಕಾಶದಲ್ಲಿ ಆ ಮೋಡವು ಕಾಣಿಸುವುದಿಲ್ಲ" ಎಂದನು. ಬೀರಬಲನು ಮನಸ್ಸಿನಲ್ಲೇ ನಗುತ್ತಾ, ಅವನಿಗೆ ಒಂದು ವಾರದ ಅನಂತರ ಆಸ್ಥಾನಕ್ಕೆ ಬರಲು ತಿಳಿಸಿ, ಏಳನೇ ಮೂರ್ಖನು ದೊರೆತ ಸಂತೋಷದಲ್ಲಿ ಮುಂದರಿದನು.

ಕೋಟೆಯು ಸಮೀಪಿಸಿತು. ಆಗ ರಾತ್ರಿಯಾಗಿತ್ತು. ಅಲ್ಲಿ ದೀಪದ ಬೆಳಕಿಗೆ ಯಾರೋ ಏನನ್ನೋ ಹುಡುಕುವುದು ಕಂಡಿತು. "ಏನನ್ನು ಹುಡುಕುತ್ತಿರುವೆ?" ಎಂದು ಬೀರಬಲನು ಪ್ರಶ್ನಿಸಲಾಗಿ, ಅವನು, "ನಾನು ಕೋಟೆಯೊಳಗಿರುವ ಅರಮನೆಯ ಏಳನೆಯ ಅಂತಸ್ತಿನಲ್ಲಿ ನನ್ನ ಉಂಗುರವನ್ನು ಕಳಕೊಂಡೆ. ಆ ಭಾಗದಲ್ಲಿ ಈಗ ಬೆಳಕಿಲ್ಲ. ಕತ್ತಲಲ್ಲಿ ಹುಡುಕಿದರೆ ಸಿಗಲಾರದೆಂದುಕೊಂಡು, ಬೆಳಕಿರುವ ಈ ಜಾಗದಲ್ಲಿ ಹುಡುಕುತಿದ್ದೇನೆ"—ಎಂದುತ್ತರವಿತ್ತನು. ಬೀರಬಲನು, ಈ ಪುಣ್ಯಾತ್ಮನಿಗೂ ಏಳು ದಿನಗಳಲ್ಲಿ

ಅರಮನೆಗೆ ಬರಲು ಹೇಳಿ, ತನ್ನ ಕೆಲಸ ಮುಗಿಯಿತೆಂದು, ಮನೆಗೆ ಹೋದನು.

ಒಂದು ವಾರ ಕಳೆಯಿತು. ಅಕಬರನು ಬೀರಬಲನೊಡನೆ, "ಬೀರ ಬಲ್, ಹತ್ತು ಮಂದಿ ಮೂರ್ಖರು ದೊರೆತರೇ?" ಎಂದು ಕೇಳಿದನು. ಬೀರಬಲನು, ತಾನು ಬರಲು ಹೇಳಿದ ಎಂಟು ಮಂದಿ ಮೂರ್ಖರನ್ನು, ಅಲ್ಲಿಗೆ ಕರೆಸಿ ನಿಲ್ಲಿಸಿ, ಪ್ರತಿಯೊಬ್ಬರ ಗುಣವೈಶಿಷ್ಟ್ಯಗಳನ್ನು ವರ್ಣಿಸಿದನು; ಅಕಬರನು ನಗುತ್ತ ಕೇಳಿ, "ಇನ್ನುಳಿದ ಇಬ್ಬರು ಮೂರ್ಖರೆಲ್ಲಿ?"— ಎನ್ನುತ್ತ, ಅತ್ತಿತ್ತ ನೋಡಿದನು.

ಬೀರಬಲನು, "ಮಹಾಪ್ರಭೊ, ಇನ್ನುಳಿದ ಇಬ್ಬರು ಮೂರ್ಖರೆಂದರೆ ನಾನು ಮತ್ತು ನೀವು!" ಎಂದನು.

ಅಕಬರನಿಗೆ ಕೋಪಬಂತು. "ನಾನೇಕೆ ಮೂರ್ಖ?"—ಎಂದು ವಿಚಾರಿಸಿದನು.

ಬೀರಬಲನು ತಣ್ಣಗೆ ಉತ್ತರವಿತ್ತನು: "ಪ್ರಭೋ, ಅರ್ಥವಿಲ್ಲದ ಈ ಕೆಲಸವನ್ನು ನನಗೆ ಹೇಳಿದ್ದಕ್ಕಾಗಿ ನೀವು ಮೂರ್ಖ; ಇದ್ದ ಒಳ್ಳೆ ಕೆಲಸ ಗಳನ್ನು ಬಿಟ್ಟು ಈ ಕೆಲಸಕ್ಕಾಗಿ ಹೊರಟ ನಾನು ಮೂರ್ಖ"—ಎಂದನು. ಅದನ್ನು ಕೇಳಿ ಅಕಬರನು ಸಂತೋಷಪಟ್ಟು, ಬೀರಬಲನನ್ನು ಹೊಗಳಿದನು.

೭. ಮುಯ್ಯಿಗೆ ಮುಯ್ಯಿ

ಒಮ್ಮೆ ಅಕಬರನೂ, ಆಸ್ಥಾನದಲ್ಲಿನ ಮತ್ತೆ ಕೆಲವರೂ ಬೀರಬಲನಿಗೆ ಗೇಲಿಮಾಡಿದರು. ಬೀರಬಲನಿಗೆ ಕೋಪಬಂದಿತಾದರೂ, ತೋರ್ಪಡಿಸ ಲಿಲ್ಲ. ಮುಯ್ಯಿಗೆ ಮುಯ್ಯಿ ತೀರಿಸುವ ಸಂದರ್ಭ ಕಾಯುತಿದ್ದನು.

ಒಂದು ದಿನ, ಅಕಬರನು ಆರಾಮದಲ್ಲಿರುವಾಗ ಬೀರಬಲನು, ತಾನು ಸ್ವರ್ಗದ ಒಬ್ಬಳು ಕನ್ನಿಕೆಯನ್ನೂ, ದೇವತೆಗಳು ಧರಿಸುವಂಥ ಬಟ್ಟೆಗಳ ನ್ನೂ ತಂದಿರುವೆನು ಎಂದು ಹೇಳಿ, ಅವನ್ನು ನೋಡಲು ಬರಬೇಕಾಗಿ ವಿನಂತಿಸಿದನು.

ಅಕಬರನೂ, ಅಂದು ಬೀರಬಲನಿಗೆ ತಮಾಷೆಮಾಡಿದವರೂ ಬೀರ ಬಲನೊಡನೆ ಹೊರಟರು. ಬೀರಬಲನು ಒಂದು ಕಾಡುಪ್ರದೇಶದಲ್ಲಿ ನಿಂತು, "ಅಲ್ಲಿ ನೋಡಿರಿ. ಕನ್ನಿಕೆಯು ಆ ಮನೆಯ ಮಹಡಿಯ ಮೇಲೆ ನಿಂತಿರುವಳು" ಎಂದನು. ಯಾರಿಗೂ ಎಲ್ಲಿಯೂ ಕನ್ನಿಕೆ ಕಾಣಿಸಲಿಲ್ಲ.

ಅದಕ್ಕೆ ಬೀರಬಲನೆಂದನು: "ಒಂದೇ ಒಂದು ತಪ್ಪನ್ನು ಮಾಡದವರಿಗೆ ಮಾತ್ರ ಅವಳು ಕಾಣಿಸಿಕೊಳ್ಳುವಳು."

ಕೂಡಲೇ, ಅಲ್ಲಿದ್ದವರೆಲ್ಲರೂ, ತಾವು ತಪ್ಪು ಮಾಡಿದವರೆಂಬುದಾಗಿ ಪ್ರಕಟವಾದೀತೋ ಎಂಬ ಭಯದಿಂದ, ತಮಗೆ ಕಾಣುತ್ತದೆಯೆನ್ನಲಾರಂಭಿಸಿ, ನಗುಮುಖಗಳನ್ನು ಹಿಡಿದರು. ಆ ಮೇಲೆ ಬೀರಬಲನು ಎಲ್ಲರಿಗೆ ಬಟ್ಟೆ ಕೊಟ್ಟಂತೆ ನಟಿಸಿ, "ನಿಮ್ಮ ಬಟ್ಟೆಗಳನ್ನು ತೆಗೆದಿಟ್ಟು ಇವನ್ನು ಉಟ್ಟು ಕೊಳ್ಳಿ" ಎಂದನು. ಅವರಿಗೆ ಬಟ್ಟೆಯು ಕೈಗೆ ತಾಗಲಿಲ್ಲ. ಆದರೂ ಸಿಕ್ಕಿತೆಂಬಂತೆ ತೋರ್ಪಡಿಸಿಕೊಂಡು, ತಮ್ಮ ಬಟ್ಟೆಗಳನ್ನು ಕಳಚಿ ಇಟ್ಟು, ಬೀರಬಲನು ಕೊಟ್ಟ ಬಟ್ಟೆಗಳನ್ನು ಉಟ್ಟವರಂತೆ ಮಾಡಿ, "ಅಹ! ಎಷ್ಟು ನಯ ಮತ್ತು ಅಂದವಾದ ಬಟ್ಟೆ!" ಎಂದು ಮೆಚ್ಚುಗೆ ಪ್ರಕಟಿಸತೊಡಗಿದರು. ಬಟ್ಟೆಯೇ ತಮಗೆ ಸಿಗಲಿಲ್ಲವೆಂದರೆ ತಾವು ಎಲ್ಲಿ ತಪ್ಪಿತಸ್ಥರಾಗುವೆವೋ ಎಂಬ ಭೀತಿ! ಅಕಬರನೂ ಈ ಸಾಮುದಾಯಿಕ ಹುಚ್ಚಿಗೆ ಮರುಳಾಗಿದ್ದನು.

ಅಷ್ಟರಲ್ಲಿ ಅಲ್ಲಿದ್ದ ಸಣ್ಣ ಹುಡುಗನೊಬ್ಬನು, "ಸೇನಾಧಿಪತಿಯ ಮೈ ಮೇಲೆ ಬಟ್ಟೆಯಿಲ್ಲ!" ಎಂದನು, ಆ ಮೇಲೆ ಎಲ್ಲರೂ "ಯಾರ ಮೈಮೇಲೂ ಬಟ್ಟೆಯಿಲ್ಲ!" ಎಂದು ಹೇಳಿದರು. ಬೀರಬಲನು ಅವರವರ ಬಟ್ಟೆಯನ್ನು ಅವರವರಿಗೆ ಕೊಡಿಸಿದನು. ಇದು, ಬೀರಬಲನು ತಮ್ಮ ಮೇಲೆ ಮುಯ್ಯಿ ತೀರಿಸಿಕೊಂಡುದೆಂದು ತಿಳಿದು, ಯಾರೂ ಚಕಾರವೆತ್ತದೆ, ಅರಮನೆಗೆ ಹಿಂತಿರುಗಿದರು.

೮. ಬೀರಬಲನು ಸ್ವರ್ಗಕ್ಕೆ ಹೋದುದು

ಅಕಬರನ ಆಸ್ಥಾನದಲ್ಲಿ ಕೆಲವರು ಬೀರಬಲನನ್ನು ದ್ವೇಷಿಸುತ್ತಿದ್ದರು. ಅವರು, ಬೀರಬಲನನ್ನು ಹೇಗಾದರೂ ಕೊಲ್ಲಿಸಬೇಕೆಂದು ಅಕಬರನೊಡನೆ, "ಜಹಾಪನಾ, ತಮ್ಮ ಹಿರಿಯರು ಸ್ವರ್ಗದಲ್ಲಿರುವರಲ್ಲವೇ? ಅವರ ಯೋಗ ಕ್ಷೇಮವನ್ನು ವಿಚಾರಿಸಲು ಬುದ್ಧಿವಂತನಾದ ಬೀರಬಲನನ್ನು ಒಮ್ಮೆ ಕಳಿಸಬಹುದಲ್ಲವೇ?''—ಎಂದು ಸೂಚಿಸಿದರು.

ಬುದ್ಧಿವಂತನಾದ ಅಕಬರನಿಗೆ, ಆಸ್ಥಾನಿಗರ ಈ ದ್ವೇಷವು ಮನವರಿಕೆಯಾಗಿತ್ತು. ಅವರಿಗೆ ಅವರ ತಪ್ಪು ತಿಳಿಸಬೇಕೆಂದೂ, ಬೀರಬಲನ ತೀಕ್ಷ್ಣ

ಬುದ್ಧಿಯು ಮತ್ತಷ್ಟು ಪ್ರಕಾಶಿಸಬೇಕೆಂದೂ ಅವನು ಬೀರಬಲನನ್ನು ಕರೆಸಿ, ಸ್ವರ್ಗಕ್ಕೆ ಹೋಗಿ ಹಿರಿಯರ ಯೋಗಕ್ಷೇಮ ವಿಚಾರಿಸಿ ಬರುವಂತೆ ಆಜ್ಞಾಪಿಸಿದನು. ಬೀರಬಲನು ಮರುಮಾತೆತ್ತದೆ ಒಪ್ಪಿದನು. ಆ ಮೇಲೆ, ಮನೆಗೆ ಹೋಗಿ, ಮನೆಯಿಂದ ಊರಹೊರಗಿನ ಬಯಲಿನ ವರೆಗೆ ಒಂದು ಸುರಂಗ ತೋಡಿಸಿದನು.

ಬೀರಬಲನು ಸ್ವರ್ಗಕ್ಕೆ ಹೊರಡಬೇಕಾದ ದಿನ ಬಂದಿತು. ಊರ ಹೊರಗಿನ ಬಯಲಲ್ಲಿ, ಬೀರಬಲನ ಮೇಲೆ ಕಟ್ಟಿಗೆಯನ್ನು ರಾಶಿ ಹಾಕಿದರು. ಬೀರಬಲನು, ಕಟ್ಟಿಗೆಯಡಿಯಿಂದ ಸುರಂಗದಲ್ಲಿಳಿದು, ಸುರಕ್ಷಿತವಾಗಿ ಮನೆ ಸೇರಿದನು. ಇತ್ತ, ಹೊರಗೆ ಕಟ್ಟಿಗೆ ರಾಶಿಗೆ ಬೆಂಕಿ ಹಚ್ಚಿದರು. ಆ ಮಹಾ ಜ್ವಾಲೆಯಲ್ಲಿ ಬೀರಬಲನು ಭಸ್ಮವಾಗಿ ಹೋದನೆಂದುಕೊಂಡು, ಶತ್ರುಗಳು ಆನಂದಪಟ್ಟರು; ಮಿತ್ರರು ದುಃಖಿತರಾದರು.

ಆರು ತಿಂಗಳು ಕಳೆದುವು. ಒಂದು ದಿನ, ದರ್ಬಾರಿಗೆ, ಗಡ್ಡ ಮೀಸೆ ಬೆಳೆದ ಒಬ್ಬನು ಬಂದನು. ಅವನಾರು ಎಂದು ವಿಚಾರಿಸಲು, ಬೀರಬಲನೆಂದು ಉತ್ತರ ಬಂತು. ಅಕಬರನು ಸಂತೋಷದಿಂದ ಬೀರಬಲನನ್ನು ಬಳಿಗೆ ಕರೆದು, ತನ್ನ ಹಿರಿಯರ ಯೋಗಕ್ಷೇಮವನ್ನು ವಿಚಾರಿಸಿದನು. ಆಗ ಬೀರಬಲನು, "ಮಹಾಪ್ರಭೋ, ತಮ್ಮ ಹಿರಿಯರೆಲ್ಲರೂ ಸುಖವಾಗಿರುವರು. ಆದರೆ, ಅವರಿಗೆಲ್ಲ ಉದ್ದಕ್ಕೆ ಗಡ್ಡ ಮೀಸೆಗಳು ಬೆಳೆದಿವೆ. ಸ್ವರ್ಗದಲ್ಲಿ ಕ್ಷೌರಿಕನಿಲ್ಲದುದರಿಂದ ಅವರಿಗೆ ಬಹಳ ತೊಂದರೆಯುಂಟಾಗಿದೆ. ಆದುದರಿಂದ ತಮ್ಮ ಕ್ಷೌರಿಕನನ್ನು ಅಲ್ಲಿಗೆ ಕಳುಹಿಸಬೇಕೆಂದಿದ್ದಾರೆ. ನನಗೆ ಆರು ತಿಂಗಳಲ್ಲಿಯೇ ಇಷ್ಟು ಬೆಳೆದಿದೆ" ಎಂದನು.

ಬೀರಬಲನನ್ನು ಸ್ವರ್ಗಕೆ ಕಳುಹಿಸಲು ಸಲಹೆಕೊಟ್ಟವರಲ್ಲಿ ಅಕಬರನ ಕ್ಷೌರಿಕನು ಮೊದಲಿಗನಾಗಿದ್ದನು.

ಅಕಬರನು ಕ್ಷೌರಿಕನಿಗೆ ಸ್ವರ್ಗಕ್ಕೆ ಹೋಗಲು ಆಜ್ಞಾಪಿಸಿದನು. ಅವನ ಮೊರೆಯನ್ನಾರೂ ಕೇಳಲಿಲ್ಲ. ಅವನನ್ನು ಮಲಗಿಸಿ ಕಟ್ಟಿಗೆಯ ರಾಶಿಯೊಡ್ಡಿ, ಬೆಂಕಿ ಹಚ್ಚಲಾಯಿತು.

Edited, Printed & Published by K. V. Shenoy
at The Prabhat Printers Ltd., Mangalore.